

# ಮಗುವಿನ ಕುತೂಹಲ ಬೆಳವಣಿಗೆಗೆ ಮೂಲ

ಮಗು ಹೊಸತನ್ನು ನೋಡಿದಾಗ ಅದನ್ನು ಅನ್ವೇಷಿಸಲು ಬಯಸುತ್ತದೆ. ಕಿಟಕಿಯಿಂದ ಒಳ ಬರುವ ಬೆಳಕಿನ ಕಿರಣಗಳನ್ನು ಹಿಡಿಯಲು ಪ್ರಯತ್ನಿಸುವ ಮಗು ಅದು ಕೈಗೆ ಸಿಗದಿದ್ದಾಗ ಪ್ರಶ್ನಿಸುತ್ತದೆ. ಬೆಂಕಿಯನ್ನು ಮುಟ್ಟಿ ಕೈಸುಟ್ಟುಕೊಂಡ ನಂತರವೇ ಅದು ಉತ್ತರ ಕಂಡುಕೊಳ್ಳುತ್ತದೆ. ಬೇರೆ ಬೇರೆ ಆಕಾರದ ಪಾತ್ರೆಯೊಳಗೆ ನೀರನ್ನು ಹಾಕಿ ನೀರಿನ ದ್ರವ್ಯರಾಶಿ ಮತ್ತು ಪರಿಮಾಣದ ಬಗ್ಗೆ ತನ್ನದೇ ಆದ ವ್ಯಾಖ್ಯಾನ ನೀಡುತ್ತದೆ. ಚಾಕೋಲೇಟ್‌ನ ಮಾಧುರ್ಯ, ನಿಂಬೆಯ ಹುಳಿ, ಬೆಂಕಿಯ ಶಾಖ, ಐಸ್‌ಕ್ರೀಮ್‌ನ ಶೀತ ಎಲ್ಲವನ್ನೂ ಕುತೂಹಲ ಕಣ್ಣುಗಳಿಂದ ನೋಡಿ ಅನುಭವಿಸಿ ತಿಳಿಯುತ್ತದೆ. ಅಚ್ಚರಿಯೊಂದಿಗೆ ಖುಷಿಪಡುತ್ತದೆ. ಆ ಮೂಲಕ ಕಲಿಯುತ್ತದೆ. ಹುಟ್ಟಿನಿಂದ ಪ್ರಾರಂಭವಾಗುವ ಮಾನವನ ಕುತೂಹಲದ ಗುಣ ಅವನ ಅಭಿವೃದ್ಧಿಗೆ ಪೂರಕವಾದುದು.

ಕುತೂಹಲ ಮಗುವಿನ ಸಹಜ ಸ್ವಾಭಾವಿಕ ಗುಣವಾಗಿದೆ. ಕುತೂಹಲದಿಂದ ಕೂಡಿದ ಮಗು ಸದಾ ಅನ್ವೇಷಿಸಲು ಮುಂದಾಗುತ್ತದೆ. ಅನ್ವೇಷಣೆಯಿಂದ ಸಂತೋಷ ಅನುಭವಿಸುತ್ತದೆ. ಸಂತಸದ ಮುಂದುವರೆದ ಭಾಗವಾಗಿ ಪರಿಶೋಧನೆಯನ್ನು ಪುನರಾವರ್ತಿಸುತ್ತದೆ. ತನ್ನ ಸಂತಸದ ಕಲಿಕೆಯನ್ನು ಇತರರೊಂದಿಗೆ ಹಂಚಿಕೊಳ್ಳುತ್ತದೆ. ಅದು ಕಲಿಕೆಯ ಇನ್ನೊಂದು ಆಯಾಮವಾಗಿದೆ.

ಮಗುವಿನ ಕುತೂಹಲ ಅದರ ಮಾನಸಿಕ ಬೆಳವಣಿಗೆಗೆ ಪ್ರಯೋಜನಕಾರಿ. ಆದರೆ, ಮಗುವಿನ ಕುತೂಹಲದ ಪ್ರಶ್ನೆಗಳಿಗೆ ದೊಡ್ಡವರಾದ ನಾವು ಭಯಭೀತರಾಗಿ ಪ್ರಶ್ನೆ ಕೇಳುವುದನ್ನೇ ನಿಲ್ಲಿಸುತ್ತಿದ್ದೇವೆ. ಏಕೆಂದರೆ ನಾವು ಸೋಮಾರಿಯಾಗಿದ್ದೇವೆ ಅಥವಾ ಮಗು ಕೇಳಿದ ಪ್ರಶ್ನೆಗೆ ಉತ್ತರಿಸಲು ನಿರ್ದಿಷ್ಟ ಉತ್ತರಗಳ ಹುಡುಕಾಟದಲ್ಲಿ ನಾವು ಸೋತಿದ್ದೇವೆ. ಅಂದಹಾಗೆ, ಕುತೂಹಲದ ಪ್ರಯೋಜನಗಳು ಕೇವಲ ಬೌದ್ಧಿಕತೆಗೆ ಸೀಮಿತವಾಗಿಲ್ಲ. ಅದು ಮಾನಸಿಕ, ಭಾವನಾತ್ಮಕ, ಸಾಮಾಜಿಕ ಮತ್ತು ಆರೋಗ್ಯಕಾರಿ ಪ್ರಯೋಜನಗಳನ್ನು ಹೊಂದಿದೆ.

ಕುತೂಹಲವು ನಿರಂತರವಾಗಿ ಬದಲಾಗುತ್ತಿರುವ ಪರಿಸರದ ಬಗ್ಗೆ ಜ್ಞಾನ ಹೆಚ್ಚಿಸಿಕೊಳ್ಳಲು ಸಹಾಯಕವಾಗುತ್ತದೆ. ಅದು ನವೀನ ಅನ್ವೇಷಣೆಗೆ ಪ್ರಚೋದಿಸುತ್ತದೆ. ಬದುಕಿನಲ್ಲಿ ವಿವಿಧ ಸನ್ನಿವೇಶಗಳನ್ನು ಎದುರಿಸುವ ಕೌಶಲ್ಯ ಬೆಳೆಸುತ್ತದೆ.

ಕುತೂಹಲವುಳ್ಳ ಜನರು ಹೆಚ್ಚು ಸಂತೋಷವುಳ್ಳವರಾಗಿರುತ್ತಾರೆ. ಕುತೂಹಲ ಹೊಂದಿದವರು ಉನ್ನತ ಮಟ್ಟದ ಸಕಾರಾತ್ಮಕ ಭಾವನೆಗಳನ್ನು ಮತ್ತು ಕಡಿಮೆ ಮಟ್ಟದ ಆತಂಕವನ್ನು ಹೊಂದಿರುತ್ತಾರೆ. ಕುತೂಹಲವು ವೈಜ್ಞಾನಿಕ ಮನೋಭಾವ ಹೆಚ್ಚಿಸುತ್ತದೆ. ಕುತೂಹಲವು ಸಂತೋಷದ ಮೂಲಕ ಕಲಿಕೆಯಲ್ಲಿ ಭಾಗವಹಿಸುವಿಕೆಯನ್ನು ಉತ್ತೇಜಿಸುವುದರಿಂದ ಶೈಕ್ಷಣಿಕ ಸಾಧನೆ ಉತ್ತುಂಗಕ್ಕೇರುತ್ತದೆ. ಆ ಕಲಿಕೆಯು ನಿಶ್ಚಿತ ಕಾರ್ಯನಿರ್ವಹಣೆಯ ಕಾರ್ಯಕ್ಷಮತೆಗೆ ಕಾರಣವಾಗುತ್ತದೆ ಎಂದು ಅಧ್ಯಯನಗಳು ತಿಳಿಸುತ್ತವೆ.

ಕುತೂಹಲವು ಮಗುವಿನ ಸಾಮಾಜಿಕ ವೃತ್ತದ ಪರಿಧಿಯನ್ನು ವಿಸ್ತರಿಸುತ್ತದೆ. ವೃತ್ತದ ಹೊರಗಿನ ಜನರೊಂದಿಗೆ ಮಾತನಾಡುವಾಗ ಮಗು ತನ್ನ ಜೀವನಕ್ಕಿಂತ ವಿಭಿನ್ನವಾದ ಜೀವನಾನುಭವವನ್ನು ಮತ್ತು ದೃಷ್ಟಿಕೋನಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಇದು ಮಗುವಿನ ಸಾಮಾಜಿಕ ವಲಯವನ್ನು ವಿಸ್ತರಿಸುವ ಮೂಲಕ ಪರಾನುಭೂತಿಯನ್ನು ಬೆಳೆಸುತ್ತದೆ.

ಕುತೂಹಲ ಎಲ್ಲಾ ಮಕ್ಕಳಲ್ಲಿ ಒಂದೇ ರೀತಿಯಾಗಿರುವುದಿಲ್ಲ. ಕೆಲವು ಮಕ್ಕಳು ಮಾನಸಿಕ ಕುತೂಹಲ ಹೊಂದಿರುತ್ತಾರೆ. ಆದರೆ ಕೆಲವು ಮಕ್ಕಳು ದೈಹಿಕ ಕುತೂಹಲ ಹೊಂದಿರುತ್ತಾರೆ. ಸ್ಪರ್ಶಿಸುವ, ವಾಸನೆ ಗ್ರಹಿಸುವ, ರುಚಿ ಆಸ್ವಾದಿಸುವ, ಏರುವ, ಇಳಿಯುವ ಇತ್ಯಾದಿ ದೈಹಿಕ ಚಟುವಟಿಕೆಗಳ ಮೂಲಕ ಕುತೂಹಲ ವ್ಯಕ್ತಪಡಿಸುತ್ತಾರೆ. ಕೆಲವು ಮಕ್ಕಳು ಅಂಜುಬುರುಕರಾಗಿದ್ದರೆ ಕೆಲವು ಮಕ್ಕಳು ಸಾಹಸ ಪ್ರವೃತ್ತಿಯ ಕುತೂಹಲಿಗಳಾಗಿರುತ್ತಾರೆ.

ಮಕ್ಕಳ ಪ್ರಶ್ನೆಗೆ ಉತ್ತರಿಸುವುದು ನಿಜಕ್ಕೂ ಕಷ್ಟಕರ. ಹಾಗಂತ ಉತ್ತರಿಸದೇ ಹೋದರೆ ಮಕ್ಕಳ ಪ್ರಶ್ನೆಗಳು ಪ್ರಶ್ನೆಗಳಾಗಿಯೇ ಉಳಿಯುತ್ತವೆ. ಆದ್ದರಿಂದ ಮಕ್ಕಳ ಪ್ರಶ್ನೆಗಳಿಗೆ ಪ್ರಾಮಾಣಿಕವಾಗಿ ಉತ್ತರಿಸುವ ಪ್ರಯತ್ನ ಮಾಡಿ. ಮಕ್ಕಳು ಪ್ರಶ್ನೆ ಕೇಳಲು ಅವಕಾಶ ನೀಡಿ. ಚರ್ಚೆಯ ಮೂಲಕ ವಿವರಣಾತ್ಮಕ ಉತ್ತರ ನೀಡಿ. ಇದರಿಂದ ಮಗುವಿನ ಕುತೂಹಲ ಪುರಸ್ಕರಿಸಲ್ಪಡುತ್ತದೆ.

ಮಗು ಸ್ವತಂತ್ರವಾಗಿ ಆಲೋಚಿಸಲು ಮುಕ್ತತೆ ಅಗತ್ಯ. ತನ್ನಲ್ಲಿ ಮೂಡಿದ ಪ್ರಶ್ನೆಗಳಿಗೆ ತಾನೇ ಸ್ವತಃ ಉತ್ತರ ಕಂಡುಕೊಳ್ಳಲು ಅವಕಾಶ ನೀಡುವುದು ಹಾಗೂ ಅದನ್ನು ಎಲ್ಲರೊಂದಿಗೆ ಹಂಚಿಕೊಳ್ಳುವುದು ಮುಕ್ತತೆಯ ಮೆಟ್ಟಿಲಾಗಿದೆ.

■ ಆರ್.ಬಿ. ಗುರುಬಸವರಾಜ